

## ಸರಳಗುಣವೇ ಒಡವೆ!

ರಾಜ್‌ಕುಮಾರ್ ಕುಟುಂಬ ಈ ಮಟ್ಟಕ್ಕೆ ಬೆಳೆಯುವುದರಲ್ಲಿ ಈ ಮನೆಯ ಹೆಣ್ಣುಮಕ್ಕಳ ಪಾತ್ರ ದೊಡ್ಡದಿದೆ. ಅವರ್‍ಯಾವತ್ತೂ ಚಿನ್ನ, ಹಣದ ವ್ಯಾಮೋಹದಲ್ಲಿ ಬಿದ್ದವರಲ್ಲ. ಆದಷ್ಟೂ ಸರಳವಾಗಿ ಬದುಕಿದವರು. ನನ್ನ ಅತ್ತೆ ಈಗಲೂ ಹಾಗೆಯೇ ಇದ್ದಾರೆ. 'ರಾಜ್‌ಕುಮಾರ್ ತಂಗೀನಾ ಇವರು?' ಎಂದು ಕೇಳಬೇಕು ಯಾರಾದ್ರು

ಮದ್ರಾಸಿನಲ್ಲಿದ್ದಾಗ ಯಾರಾದರೂ ಮನೆಗೆ ಬಂದರೆ ನಮ್ಮತ್ತೆಯನ್ನು ನೋಡಿ 'ಇವರು ಕೆಲಸದವರಾ?' ಎಂದು ಕೇಳುತ್ತಿದ್ದರು. ಅವರೂ ಒಂಚೂರು ಬೇಜಾರು ಮಾಡಿಕೊಳ್ಳದೆ 'ಹೌದಪ್ಪಾ, ನಮ್ಮಣ್ಣನ ಮನೆಯ ಕೆಲಸ ಮಾಡುತ್ತಿದ್ದೇನೆ, ತಾಯಿಯಾಗಿ' ಎಂದು ಹೇಳುತ್ತಿದ್ದರು.

ಅವರಿಗೆ ಆಸ್ತಿ – ಹಣ ಎಂಬುದರ ಬಗ್ಗೆಯೆಲ್ಲ ಯಾವತ್ತೂ ಯೋಚನೆ ಇಲ್ಲ. ಯಾವಾಗ ನೋಡಿದರೂ ಕೆಲಸ ಕೆಲಸ... ಈಗಲೂ ಅವರ ಕೆಲಸ ಅವರೇ ಮಾಡಿಕೊಳ್ಳುತ್ತಾರೆ. ಅವರ ಬಟ್ಟೆ ಅವರೇ ತೊಳೆದುಕೊಳ್ಳುತ್ತಾರೆ. ಅವರೆಲ್ಲರ ಸರಳತೆಯೇ ನಮ್ಮ ಕುಟುಂಬವನ್ನು ಈ ಮಟ್ಟಕ್ಕೆ ಬೆಳೆಸಿದೆ.

ಕೇಳಿಸುತ್ತಿರಲಿಲ್ಲ, ದೃಷ್ಟಿ ಮಂದವಿತ್ತು. ಕೈಕಾಲು ಎತ್ತಲಿಕ್ಕೇ ಆಗುತ್ತಿರಲಿಲ್ಲ. ಇಂಥ ಸಮಯದಲ್ಲಿ ಹೆಂಡತಿ ನನ್ನನ್ನು ನೋಡಿಕೊಂಡ ರೀತಿ ಇದೆಯಲ್ಲ, ಒಂದು ಕೈ ನನ್ನ ತಾಯಿಗಿಂತ ಜಾಸ್ತಿ ಅವಳು. ನನಗೆ ಬಾತ್‌ರೂಮ್‌ಗೆ ಹೋದರೆ ಸ್ನಾನ ಮಾಡಕ್ಕಾಗುತ್ತಿರಲಿಲ್ಲ. ತೊಳೆದುಕೊಳ್ಳಲಿಕ್ಕೂ ಆಗುತ್ತಿರಲಿಲ್ಲ. ಈ ಎಲ್ಲವನ್ನೂ ಅವಳು ಮಾಡಿದಳು. ನನ್ನ ತಾಯಿ ಇದನ್ನೆಲ್ಲ ಮಾಡುತ್ತಿದ್ದಾಗ ನಾನಿನ್ನೂ ಮಗುವಾಗಿದ್ದೆ. ಆದರೆ ಹೆಂಡತಿ ಮಾಡುವ ಸಂದರ್ಭದಲ್ಲಿ ನಾನು ಅವಳಿಗಿಂತ ದೊಡ್ಡವನಾಗಿದ್ದೆ.

'ನಂಜುಂಡಿ ಕಲ್ಯಾಣ' ಸಿನಿಮಾದ ಜನಪ್ರಿಯ ನಟ ರಾಘವೇಂದ್ರ ರಾಜ್‌ಕುಮಾರ್ ಸಡನ್ನಾಗಿ ರೋಗಿಯಾಗಿಬಿಟ್ಟರೆ ಅವಳ ಮನಃಸ್ಥಿತಿ ಏನಾಗಿರಬೇಡ? ಎರಡು ಮಕ್ಕಳಿದ್ದಾರೆ. ಅಮ್ಮನಿಗೆ ಕ್ಯಾನ್ಸರ್ ಇದೆ. ಇಂಥ ಸಮಯದಲ್ಲಿ ಅವಳು ನನ್ನನ್ನು ಆರು ವರ್ಷ ಅಕ್ಷರಶಃ ಸಾಕಿದಳು. ನಾವು ಹಟ ಮಾಡಿದಾಗ ತಾಯಿಯಾದರೆ ಹೊಡೆದುಬಿಡುತ್ತಾಳೆ. ಆದರೆ ಇವಳು ಹೊಡೆಯುವ ಹಾಗಿಲ್ಲ. ನನ್ನ ಕೋಪವನ್ನೆಲ್ಲ ಸಹಿಸಿಕೊಂಡು ಸಲುಹಿದಳು. ನಾನು ಬೈದಿದ್ದು ಬೈಸಿಕೊಂಡು ಪೋಷಿಸಿದಳು.

ಈವತ್ತೂ ನನ್ನನ್ನು ನೋಡಿಕೊಳ್ಳುತ್ತಿರುವವಳು ಅವಳೇ. ಅವಳ ಧೈರ್ಯದಿಂದ ನಾನು ಈಗ ಮೂರು ಸಿನಿಮಾ ಮಾಡುತ್ತಿದ್ದೇನೆ. ಅವಳನ್ನು ನೋಡಿದಾಗ ನನಗನ್ನಿಸುತ್ತದೆ. 'ಅಮ್ಮ ಎಲ್ಲಿಯೂ ಹೋಗಿಲ್ಲ. ನನ್ನ ಕಣ್ಣೆದುರಿಗೇ ಇದ್ದಾಳೆ'.

ನನಗೆ ಸ್ಟ್ರೋಕ್ ಆಗಿದ್ದರಿಂದ ಕಳೆದುಕೊಂಡಿದ್ದು ಕಮ್ಮಿ; ಪಡೆದುಕೊಂಡಿದ್ದೇ ಜಾಸ್ತಿ. ಇಂದು ನಾನು ಏನೇ ಸಾಧನೆ ಮಾಡಿದರೂ ಅದನ್ನು ನನ್ನ ಹೆಂಡತಿ ಪಾದಕ್ಕೆ ಹಾಕಬೇಕು. ಆರು ವರ್ಷಗಳಿಂದ ನಾನು ಅನುಭವಿಸುತ್ತಿರುವ ಸ್ಟ್ರೋಕ್ ನನ್ನ ಪಾಲಿಗೆ ವಿಶ್ವವಿದ್ಯಾಲಯ.

ಅಪ್ಪಾಜಿ ಯಾವಾಗಲೂ ಹೇಳುತ್ತಿದ್ದರು; 'ಹೆಂಡತಿಯಲ್ಲಿ ಬರೀ ಕಾಮವನ್ನು ಹುಡುಕಬೇಡ. ಅಮ್ಮನನ್ನು ಹುಡುಕು. ಸಿಕ್ತಾಳೆ. ಅವರೊಳಗಿರುವ ತಾಯಿತನವನ್ನು ನಾವು ಹೊರಗಡೆ ತರಬೇಕು. ಒಮ್ಮೆ ಆ ತಾಯ್ತನ ಹೊರಬಂದರೆ ಬರುತ್ತಲೇ ಇರುತ್ತದೆ. ಆಮೇಲೆ ಅಲ್ಲಿಯೇ ನಿನಗೆ ಮಗಳು ಸಿಕ್ತಾಳೆ; ಸೊಸೆ ಸಿಕ್ತಾಳೆ ಕಂದಾ... ನಾವು ಹುಡುಕಬೇಕು ಅಷ್ಟೆ.' ಅವರ ಮಾತು ನನ್ನ ಬದುಕಿನಲ್ಲಿ ಅಕ್ಷರಶಃ ನಿಜವಾಗಿದೆ.

ನನಗೆ ಸ್ಟ್ರೋಕ್ ಆದಾಗ ಅಮ್ಮ ತುಂಬ ಬೇಜಾರು ಮಾಡಿಕೊಂಡಿದ್ದರು. 'ನೀನು ಚೆನ್ನಾಗಿ ನಟನೆ ಮಾಡಿಕೊಂಡಿದ್ದೆ. ನಿನ್ನದೇ ಅಂತ ವೃತ್ತಿ ಇತ್ತು. ಅದನ್ನು ಬಿಡಿಸಿ ಮನೆ ನೋಡಿಕೊಳ್ಳುವ ಜವಾಬ್ದಾರಿ ವಹಿಸಿ ಟೆನ್ಷನ್ ಕೊಟ್ಟುಬಿಟ್ಟೆ. ನಿನ್ನನ್ನು ನಾನೇ ಸ್ಟ್ರೋಕ್‌ಗೆ ತಳ್ಳಿಬಿಟ್ಟೆ. ನನ್ನನ್ನು ಕ್ಷಮಿಸಿಬಿಡ್ತೀಯಾ?' ಎಂದು ಕೇಳುತ್ತಿದ್ದರು. 'ಹಂಗೆಲ್ಲ ಅನ್ಬೇಡ. ತಾಯಿ ಯಾವತ್ತೂ ಮಕ್ಕಳಿಗೆ ಕೇಡು ಮಾಡಕ್ಕೆ ಆಗಲ್ಲ. ನಾನು ಮತ್ತೆ ಆ್ಯಕ್ಟ್ ಮಾಡ್ತೀನಿ. ಇದರಿಂದ ಬೇರೆ ಏನೋ ಸಿಗುವುದಿದೆ ನನಗೆ ಅನಿಸುತ್ತದೆ' ಎಂದು ಸಮಾಧಾನ ಮಾಡುತ್ತಿದ್ದೆ ನಾನು.

'ಅಮ್ಮನ ಮನೆ' ಸಿನಿಮಾ ಒಪ್ಪಿಕೊಂಡಿದ್ದೂ ಇದೇ ಕಾರಣಕ್ಕೆ. ತಾಯಿ, ಹೆಂಡತಿ ಮತ್ತು ಮಗಳನ್ನು ಒಬ್ಬ ಹೇಗೆ ಸಮದೂಗಿಸಿಕೊಂಡು ಹೋಗಬಹುದು ಎನ್ನುವುದೇ ಅಮ್ಮನ ಮನೆ ಸಿನಿಮಾದ ಕಥೆ. ಆ ಕಥೆ ಕೇಳಿದ ತಕ್ಷಣ ಒಪ್ಪಿಕೊಂಡುಬಿಟ್ಟೆ. ಆ ಮೂರೂ ಪಾತ್ರಗಳನ್ನೂ ನೋಡಿದ ಹಾಗಾಯ್ತು. ಮತ್ತೆ ಅಮ್ಮನ ಜತೆ ಬದುಕಿದ ಹಾಗಾಯ್ತು ಈ ಸಿನಿಮಾದಿಂದ. ಈ ಸಿನಿಮಾದಲ್ಲಿ ನಾನು ನಟಿಸಿಲ್ಲ. ವರ್ತಿಸಿದ್ದೇನೆ.

### ಮಕ್ಕಳಲ್ಲಿಯೂ ಅಮ್ಮನ ಅಕ್ಕರೆ

ನನಗೆ ಇಬ್ಬರು ಗಂಡುಮಕ್ಕಳು. ಶಿವಣ್ಣನಿಗೆ ಮತ್ತು ಅಪ್ಪುವಿಗೆ ಇಬ್ಬರಿಗೂ ಎರಡು ಹೆಣ್ಣುಮಕ್ಕಳು. ಆ ನಾಲ್ಕು ಹೆಣ್ಣುಮಕ್ಕಳೂ ನನ್ನ ಮಕ್ಕಳೇ. ನನಗೇ ಹೆಣ್ಣುಮಕ್ಕಳನ್ನು ಕೊಟ್ಟುಬಿಟ್ಟರೆ ಅವರ ಮೇಲೆ ಪ್ರೀತಿ ಕಮ್ಮಿಯಾಗುತ್ತದೆ ಎಂದು ದೇವರೇ ನನಗೆ ಹೆಣ್ಣುಮಕ್ಕಳನ್ನು ಕೊಟ್ಟಿಲ್ಲ ಅನಿಸುತ್ತದೆ. ನನ್ನ ಹೆಣ್ಣುಮಕ್ಕಳನ್ನು ಅವರಲ್ಲಿ ನೋಡುತ್ತೇನೆ. ಅಪ್ಪು ಮತ್ತು ಶಿವಣ್ಣ ಅವರು ಗಂಡುಮಕ್ಕಳನ್ನು ನನ್ನ ಮಕ್ಕಳಲ್ಲಿ ನೋಡುತ್ತಾರೆ. ಈ ಬಾಂಧವ್ಯ ಬಿಡಿಸಬಾರದು ಎಂಬ ಕಾರಣಕ್ಕಾಗಿಯೇ ದೇವರು ಹೀಗೆ ಮಾಡಿದ್ದಾನೆ ಅನಿಸುತ್ತದೆ.

ಅಪ್ಪುವಿನ ಇಬ್ಬರು ಹೆಣ್ಣುಮಕ್ಕಳೂ ನನ್ನ ಜೊತೆಗೇ ಬೆಳೆದಿದ್ದು. ಒಬ್ಬಳ ಹೆಸರು ಧೃತಿ, ಇನ್ನೊಬ್ಬಳು ವಂದಿತಾ. ಅವರಿಬ್ಬರೂ ನನ್ನ ಜೊತೆಗೇ ಇರ್ತಾರೆ. ನಮ್ಮ ಮನೆಯಲ್ಲಿಯೇ ಮಲಗುತ್ತಾರೆ. ಅಪ್ಪುವನ್ನು ಅವರು 'ಪಪ್ಪಾ' ಎಂದು ಕರೆಯುತ್ತಾರೆ; ನನ್ನನ್ನು 'ಅಪ್ಪಾ' ಅಂತ ಕರೀತಾರೆ.

ನಮ್ಮ ಕುಟುಂಬ ಇರುವುದೇ ಹಾಗೆ. ಕುಟುಂಬವೇ ನಮ್ಮ ಶಕ್ತಿ. ಅಪ್ಪಾಜಿ ನಮಗೆ ಯಾವುದನ್ನೂ ಹೇಳಿಕೊಟ್ಟಿಲ್ಲ. ಎಲ್ಲವನ್ನೂ ತೋರಿಸಿಕೊಟ್ಟಿದ್ದಾರೆ. ಹೇಳಿಕೊಡುವುದಕ್ಕೂ ತೋರಿಸಿಕೊಡುವುದಕ್ಕೂ ತುಂಬಾನೇ ವ್ಯತ್ಯಾಸವಿದೆ. ನಮ್ಮಮ್ಮನನ್ನು ಅವರು ಯಾವತ್ತೂ 'ಹೋಗೇ ಬಾರೇ' ಎಂದು ಕರೆದಿಲ್ಲ. ಅದಕ್ಕೆ ನಾನು ನನ್ನ ಹೆಂಡತಿಯನ್ನು ಯಾವತ್ತೂ 'ಬಾರೆ ಹೋಗೆ' ಎಂದು ಕರೆಯುವುದಿಲ್ಲ. 'ಅಮ್ಮ' ಅಂತಲೇ ಕರೆಯುತ್ತೇನೆ.

ನನಗೆ ಬದುಕನ್ನು ಹೀಗೆ ಬೇರೆಯದೇ ರೀತಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿದ್ದು ಸ್ಟ್ರೋಕ್‌ನಿಂದ. ಹಾಗಾಗಿ ನಾನು ನನಗೆ ಸ್ಟ್ರೋಕ್ ಕೊಟ್ಟಿದ್ದಕ್ಕಾಗಿ ದೇವರಿಗೆ ಒಂದು ಥ್ಯಾಂಕ್ಸ್ ಹೇಳುತ್ತೇನೆ. ತೊಂದರೆಯನ್ನೂ ಎಂಜಾಯ್ ಮಾಡಲು ಶುರುಮಾಡಿದ್ದೇನೆ ಈಗ. ಕೆಲವು ವರ್ಷಗಳ ಹಿಂದೆ ಸ್ಟ್ರೋಕ್ ಆಗಿ ಸಿಂಗಪುರಕ್ಕೆ ವೀಲ್‌ಚೇರಿನಲ್ಲಿ ಹೋಗಿದ್ದೆ. ಈಗ ಅದೇ ದೇಶಕ್ಕೆ ನನ್ನ ಸಿನಿಮಾ ಜೊತೆಗೆ ಹೀರೊ ಆಗಿ ಹೋಗುತ್ತಿದ್ದೇನೆ. ಬದುಕು ಏನನ್ನೋ ಕಲಿಸಲಿಕ್ಕಾಗಿಯೇ ನಮಗೆ ತೊಂದರೆಗಳನ್ನು ಕೊಡುತ್ತದೆ. ಆ ಪಾಠಗಳನ್ನು ನಾವು ಕಲಿತುಕೊಳ್ಳಬೇಕಷ್ಟೆ.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in